ಈ ಕಾಮಗಾರಿಯನ್ನು ಸಿಆರ್‌ಎಫ್ ಯೋಜನೆ ಅಡಿಯಲ್ಲಿ ರೂ.150.00 ಲಕ್ಷಗಳ ಮತ್ತು ಅನುಮೋದನೆಗೆ ಪ್ರಸ್ತಾಪಿಸಲಾಗಿದ್ದು, ಕೇಂದ್ರ ಸರ್ಕಾರದ ಅನುಮೋದನೆ ದೊರಕಬೇಕಾಗಿದೆ.

ಈ) ಶ್ರೀರಂಗಪಟ್ಟಣ ತಾಲ್ಲೂಕಿನ ಚಿನ್ನಾಯಕನಹಳ್ಳಿ–ತೂಬಿನಕೆರೆ ರಸ್ತೆಯ ಅಭಿವೃದ್ಧಿ ಕಾರ್ಯ ಯಾವ ಹಂತದಲ್ಲಿದೆ?

ಈ ಕಾಮಗಾರಿಯು 5054–ಓಆರ್‌ಎಫ್ ಅಡಿಯಲ್ಲಿ ರೂ.20.00 ಲಕ್ಷಗಳಿಗೆ ಅನುಮೋದನೆಯಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ.

236 ಶ್ರೀ ಶಿವಶಂಕರರೆಡ್ಡಿ ಎನ್.ಹೆಚ್

ಲೋಕೋಪಯೋಗಿ ಸಚಿವರು

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ರಾಜ್ಯ ಹೆದ್ದಾರಿ ವ್ಯಾಪ್ತಿಗೆ ಬರುವ ಲೋಕೋಪಯೋಗಿ ಇಲಾಖಾ ರಸ್ತೆಗಳು ಸಂಚಾರಕ್ಕೆ ಸುವ್ಯವಸ್ಥಿತವಾಗಿಲ್ಲದೇ ಶೀಘ್ರ ರೀತಿಯಲ್ಲಿ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಗೌರಿಬಿದನೂರು ತಾಲ್ಲೂಕಿನಲ್ಲಿ 3 ರಾಜ್ಯ ಹೆದ್ದಾರಿಗಳು ಹಾದುಹೋಗುತ್ತಿದ್ದು, ಅವುಗಳ ಉದ್ದ 123.10 ಕಿ.ಮೀ.

ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಮತ್ತು ನಿರ್ವಹಣೆಯ 3 ವರ್ಷಗಳ ಅವಧಿ ಪ್ಯಾಕೇಜ್ ಅಡಿಯಲ್ಲಿ 2006–07ನೇ ಸಾಲಿನಲ್ಲಿ ಒಟ್ಟು ರೂ.543.00 ಲಕ್ಷಗಳ ಅನುದಾನದಲ್ಲಿ 35.23 ಕಿ.ಮೀ ಉದ್ದದ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗಿದ್ದು, 86.87 ಕಿ.ಮೀ ಉದ್ದದ ರಸ್ತೆಯನ್ನು ನಿರ್ವಹಣೆ ಮಾಡಲಾಗಿರುತ್ತದೆ. 2008–09ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 3054 ಯೋಜನೇತರ ಅಡಿಯಲ್ಲಿ 3 ರಾಜ್ಯ ಹೆದ್ದಾರಿಗಳ ಆಯ್ದಭಾಗಗಳಲ್ಲಿ ರೂ.12.00 ಲಕ್ಷಗಳ ಅನುದಾನದಲ್ಲಿ ಗುಂಡಿಗಳನ್ನು ಮುಚ್ಚಿ ದುರಸ್ತಿ ಕಾರ್ಯ ನಿರ್ವಹಿಸಲಾಗಿದ್ದು, ರಸ್ತೆಗಳ ಸಂಚಾರಕ್ಕೆ ಯೋಗ್ಯವಾಗಿದೆ. ರಾಜ್ಯ ಹೆದ್ದಾರಿ–94ರ ಆಯ್ದಭಾಗಗಳನ್ನು ಬಲಪಡಿಸಿ ಅಭಿವೃದ್ಧಿಪಡಿಸಬೇಕಾಗಿದ್ದು, ಅನುದಾನದ ಲಭ್ಯತೆಯನ್ನಾಧರಿಸಿ ಭವಿಷ್ಯದಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಆ) ಈ ರಸ್ತೆಗಳ ಅಭಿವೃದ್ಧಿಗೆ ಸರ್ಕಾರವು 2007–08ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನವೆಷ್ಟು, ಹದಗೆಟ್ಟಿರುವ ರಸ್ತೆಗಳ ಅಭಿವೃದ್ಧಿಗೆ ಸರ್ಕಾರವು ಕೈಗೊಳ್ಳುವ ಕ್ರಮವೇನು: ಯಾವಾಗ ಅಭಿವೃದ್ಧಿಪಡಿಸಲಾಗುವುದು;

ಇ) ಯಲಹಂಕದಿಂದ ಸೋಮಂದ ಹಳ್ಳಿಯವರೆವಿಗೂ ಚತುಷ್ಪಥ ರಸ್ತೆಯನ್ನು ನಿರ್ಮಾಣ ಮಾಡುವ ಉದ್ದೇಶವು ಸರ್ಕಾರದ ಮುಂದಿದೆಯೇ; ಹಾಗಿದ್ದರೆ, ಯಾವಾಗ ನಿರ್ಮಾಣ ಮಾಡಿ, ಈ ಭಾಗದ ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದು?

ರಾಜ್ಯ ಹೆದ್ದಾರಿ–9 ಯಲಹಂಕದಿಂದ ಕುಡುಮಲಕುಂಟೆ ರಾಜ್ಯ ಹೆದ್ದಾರಿಯನ್ನು ಯಲಹಂಕದಿಂದ ಗೌರಿಬಿದನೂರು ಮಾರ್ಗವಾಗಿ ಆಂಧ್ರಪ್ರದೇಶದ ಗಡಿಯವರೆಗೆ ಒಟ್ಟು

ಲ-10ಕ್ಷ3-138

70.90 ಕಿ.ಮೀ ಉದ್ದವನ್ನು ಚತುಷ್ಪಥ ರಸ್ತೆಯನ್ನಾಗಿ ನಿರ್ಮಿಸಲು ಪಿಪಿಪಿ ಯೋಜನೆಯ ಪ್ಯಾಕೇಜ್ ಅಡಿ ಕೈಗೆತ್ತಿಕೊಳ್ಳಲು ಪ್ರಕ್ರಿಯೆ ಪ್ರಗತಿಯಲ್ಲಿದೆ.

242 ಶ್ರೀ ಸಂಪಂಗಿ.ಎನ್.(ಬಾಗೇಪಲ್ಲಿ)

ಮಾನ್ಯ ಪೌರಾಡಳಿತ ಸಚಿವರು

ಅ) ರಾಜ್ಯದ ಪಟ್ಟಣಗಳ ಅಭಿವೃದ್ಧಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ದಿಂದ ಹಾಕಿಕೊಂಡಿರುವ ಯೋಜನೆಗಳು ಯಾವುವು; ಅದಕ್ಕಾಗಿ ಎರಡು ವರ್ಷಗಳಿಂದ ಮಾಡಿದಂತಹ ಖರ್ಚುಗಳು ಎಷ್ಟು; ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಯಾಗಿದೆ; (ಪಟ್ಟಣವಾರು ಮಾಹಿತಿ ಒದಗಿಸುವುದು);

ಪಟ್ಟಣಗಳ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ (1) ಯುಐಡಿ ಎಸ್ಎಸ್ಎಂಟಿ(2) 12ನೇ ಹಣಕಾಸು (3) ರಾಜ್ಯ ಹಣಕಾಸು ಯೋಜನೆಗಳು (4)ಎಸ್.ಜೆ,ಎಸ್,ಆರ್.ವೈ ಯೋಜನೆಗಳನ್ನು ಹಾಕಿಕೊಳ್ಳಲಾಗಿವೆ. ಈ ಕುರಿತು 2ವರ್ಷದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಬಿಡುಗಡೆಮಾಡಿದ ಮತ್ತು ಖರ್ಚು ಮಾಡಿದ ಮೊತ್ತದ ವಿವರ ಇಂತಿದೆ;

(ರೂ.ಕೋಟಿಗಳಲ್ಲಿ)

ಯೋಜನೆ	ಕೇಂದ್ರದಿಂದ ಬಿಡುಗಡೆ ಹಣ	ರಾಜ್ಯದಿಂದ ಬಿಡು ಗಡೆ ಹಣ	ಒಟ್ಟು ಮೊತ್ತ	ಖರ್ಚು
ಯುಐಡಿಎಸ್ಎಸ್ ಎಂಟಿ	278.16	26.52	304.68	57.80
12ನೇ ಹಣ ಕಾಸು	220.86	–	220.86	105.42
ರಾಜ್ಯ ಹಣಕಾಸು ಯೋಜನೆಗಳು (ಮುಕ್ತ ನಿಧಿ)	–	1371.14	1371.14	499.45
ಎಸ್.ಜೆ.ಎಸ್ ಆರ್.ವೈ	60.59	14.11	74.70	41.76